ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 10.06.2025

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ದ್ವಿತೀಯ ಪಿ.ಯು.ಸಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ವ್ಯವಸಾಯ ಮತ್ತು ಟೈಲರಿಂಗ್ ಕೆಲಸ ಮಾಡುತ್ತೇನೆ. ನಾನು 15-20 ವರ್ಷಗಳಿಂದ ಟೈಲರಿಂಗ್ ಕೆಲಸ ಮಾಡುತ್ತಿದ್ದೇನೆ. ನಾನು ಕೊಂಡಿಯಾಲ ಗ್ರಾಮದಲ್ಲಿ ಟೈಲರಿಂಗ್ ಕೆಲಸ ಮಾಡುತ್ತೇನೆ. ನನ್ನದು ಸ್ವಂತ ಟೈಲರ್ ಅಂಗಡಿ ಇರುತ್ತದೆ. ನನ್ನ ಅಂಗಡಿಯ ಹೆಸರು ಕುಮಾರ್ ಟೈಲರಿಂಗ್ ಎಂದು ಇರುತ್ತದೆ. ನಾನು ತಿಂಗಳಿಗೆ ರೂ.25,000/- ಸಂಪಾದನೆ ಮಾಡುತ್ತೇನೆ. ನನ್ನ ಟೈಲರಿಂಗ್ ಅಂಗಡಿಯಲ್ಲಿ ನಾನು ಒಬ್ಬನೇ ಕೆಲಸ ಮಾಡುತ್ತೇನೆ. ಕುಮಾರ್ ಟೈಲರಿಂಗ್ ಅಂಗಡಿಯನ್ನು ನಾನು ಬಾಡಿಗೆಗೆ ತೆಗೆದುಕೊಂಡಿದ್ದೇನೆ. ಅದರ ಬಾಡಿಗೆ ರೂ.1,500/- ಇರುತ್ತದೆ. ನನ್ನ ಅಂಗಡಿಯ ಮಾಲೀಕರು ಜಗದೀಶ್ ಎನ್ನುವವರು ಇರುತ್ತಾರೆ.

ನಾನು ತಿಂಗಳಿಗೆ ರೂ.5,000/- ಬಂಡವಾಳ ಹಾಕಿದರೆ ರೂ.25,000/- ನನಗೆ ಆದಾಯ ಬರುತ್ತದೆ. ಟೈಲರಿಂಗ್ ನಡೆಸಲು ನಾನು ಸಂಬಂಧಿಸಿದ ಪಂಚಾಯಿತಿಂದ ಲೈಸೆನ್ಸ್ ತೆಗೆದುಕೊಂಡಿರುವುದಿಲ್ಲ. ನನ್ನ ಟೈಲರಿಂಗ್ ಅಂಗಡಿಯಿಂದ ಹಣವು ನಗದಾಗಿ ಬರುತ್ತದೆ. ನನ್ನದು ಕುಮಾರ್ ಟೈಲರಿಂಗ್ ಅಂಗಡಿ ಇದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಅದೇ ರೀತಿ ನನಗೆ ತಿಂಗಳಿಗೆ ರೂ.25,000/- ಆದಾಯ ಬರುತ್ತದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಅಂಗಡಿಯಲ್ಲಿ ಬೇರೆಯವರು ಕೊಟ್ಟ ಬಟ್ಟೆಯನ್ನು ಹೊಲೆದು ಕೊಡುವ ಕೆಲಸವನ್ನು ನಾನು ಮಾಡುತ್ತೇನೆ. ಬೇರೆಯವರು ಬಟ್ಟೆ ಕೊಟ್ಟಾಗ ನಾನು ಅವರಿಗೆ ರಶೀದಿಯನ್ನು ನೀಡುವುದಿಲ್ಲ. ಅದೇ ರೀತಿ ಬಟ್ಟೆ ಹೊಲೆದು ಕೊಟ್ಟಾಗ ಬಟ್ಟೆಯ ಮಾಲೀಕರು ನನಗೆ ಯಾವುದೇ ರಶೀದಿಯನ್ನು ಸಹಾ ಕೊಡುವುದಿಲ್ಲ.

ಕೊಡಿಯಾಲದಲ್ಲಿ ನನ್ನದು ಯಾವುದೇ ಟೈಲರಿಂಗ್ ಅಂಗಡಿ ಇರುವುದಿಲ್ಲ ಹಾಗೂ ನಾನು ಯಾವುದೇ ಟೈಲರಿಂಗ್ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ.25,000/- ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ 1 ಎಕರೆ 7 ಗುಂಟೆ ಜಮೀನು ಇರುತ್ತದೆ. ಅದರ ಪಹಣಿ ಪತ್ರಿಕೆ ನನ್ನ ಹೆಸರಿನಲ್ಲಿ ಇರುತ್ತದೆ. ಪಹಣಿ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಜಮೀನಿನಲ್ಲಿ ನಾನು ರೇಷ್ಮೆ ಬೆಳೆಯನ್ನು ಬೆಳೆಯುತ್ತೇನೆ. ಸದರಿ ಜಮೀನಿನಲ್ಲಿ ನಾನು ವ್ಯವಸಾಯವನ್ನು ಕೂಲಿ ಜನರಿಗೆ ಕೂಲಿಯನ್ನು ನೀಡಿ ಕೆಲಸವನ್ನು ಮಾಡಿಸಿಕೊಳ್ಳುತ್ತೇನೆ. ಸದರಿ ಜಮೀನಿನಿಂದ ವರ್ಷಕ್ಕೆ ರೂ.1,00,000/- ವರೆಗೂ ಆದಾಯ ಇತ್ತು. ಸದರಿ ಜಮೀನನ್ನು ಮಾರಾಟ ಮಾಡಿ 2 ವರ್ಷ ಆಗಿರುತ್ತದೆ. ಸದರಿ ಜಮೀನನ್ನು ನಾನು 2012 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಜಮೀನಿನಲ್ಲಿ ರೂ.1,00,000/- ಆದಾಯ ಪಡೆಯಲು 25,000/-ರೂ . ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸದರಿ ಜಮೀನಿಂದ ರೂ.1,00,000/- ಆದಾಯ ಬರುತ್ತಿದ್ದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಅದೇ ರೀತಿ 25,000/-ರೂ . ಹಣವನ್ನು ಖರ್ಚು ಮಾಡುತ್ತಿದ್ದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ಇಬ್ಬರು ಮಕ್ಕಳು ವಾಸವಾಗಿರುತ್ತೇವೆ. ನನ್ನ ಮನೆಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆಯವರು ಕೆಲಸ ಮಾಡುವುದಿಲ್ಲ.

2014 ರಲ್ಲಿ ನನ್ನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. 2014 ರಲ್ಲಿ ನನ್ನ ಮಕ್ಕಳು 6 ಮತ್ತು 7 ನೇ ತರಗತಿ ಓದುತ್ತಿದ್ದರು. ನನ್ನ ಮಕ್ಕಳು ಚಿನ್ಮಯ ವಿದ್ಯಾಲಯ ಶಾಲೆಯಲ್ಲಿ ಓದುತ್ತಿದ್ದರು. 2014 ರಲ್ಲಿ ನನ್ನ ಒಬ್ಬ ಮಗನಿಗೆ ವಾರ್ಷಿಕವಾಗಿ 40 ರಿಂದ 50 ಸಾವಿರ ರೂ. ಖರ್ಚು ಆಗುತ್ತಿತ್ತು. 2014 ರಲ್ಲಿ ನಮ್ಮ ಮನೆಯ ಸಂಸಾರಕ್ಕಾಗಿ ತಿಂಗಳಿಗೆ 4 ರಿಂದ 5 ಸಾವಿರ ರೂ. ಬೇಕಾಗುತ್ತಿತ್ತು.

2013 ರಲ್ಲಿ ನನ್ನದು ಟೈಲರಿಂಗ್ ಅಂಗಡಿ ಇತ್ತು. 2013 ರಲ್ಲಿ ಟೈಲರಿಂಗ್ ಅಂಗಡಿಯಿಂದ ನನಗೆ ಮಾಸಿಕವಾಗಿ 20 ಸಾವಿರ ಆದಾಯ ಇತ್ತು. 2013 -14 ರಲ್ಲಿ ನನ್ನ ಹೆಂಡತಿ ಮತ್ತು ಮಕ್ಕಳುಗಳು ನನ್ನ ಆದಾಯಕ್ಕೆ ಅವಲಂಬಿತವಾಗಿದ್ದರು ಎಂದರೆ ಸರಿ. ನಾನು

ಈ ದೂರನ್ನು ಎನ್.ಕೆ. ದೇವರಾಜುರವರ ವಿರುದ್ದ ಸಲ್ಲಿಸಿರುತ್ತೇನೆ. ದೂರು ದಾಖಲಿಸುವ ಮುಂಚೆ 3-4 ವರ್ಷಗಳಿಂದ ಆರೋಪಿ ನನಗೆ ಪರಿಚಯ ಇರುತ್ತದೆ. ಈ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಆರೋಪಿ ಕೊಡಿಯಾಲದಲ್ಲಿ ಮದುವೆಯಾಗಿರುವುದರಿಂದ ಅವರು ನಮ್ಮ ಅಂಗಡಿಯ ಬಳಿ ಬಂದು ಹೋಗಿ ಮಾಡುತ್ತಿದ್ದರು.

ಆರೋಪಿ ತಂದೆ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಕೊಡಿಯಾಲದಲ್ಲೇ ವಾಸವಾಗಿದ್ದರು. ಆರೋಪಿ ಏನು ಕೆಲಸ ಮಾಡುತ್ತಿದ್ದರು ಹಾಗೂ ಎಷ್ಟು ಸಂಬಳ ಬರುತ್ತದೆ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ಮಂಡ್ಯದಲ್ಲಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು ಅವರ ಸಂಬಳವನ್ನು ನಾನು ಕೇಳಿರುವುದಿಲ್ಲ. ಆರೋಪಿಯದ್ದು ಸರ್ಕಾರಿ ನೌಕರಿ ಇರುತ್ತದೆ. ಆರೋಪಿಗೆ ಅವರ ಮನೆಯ ಕಡೆ ಆದಾಯ ಮತ್ತು ಜಮೀನು ಇರುವ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

ಆರೋಪಿಯನ್ನು ಹೊರತುಪಡಿಸಿ ನೀವು ಬೇರೆಯವರಿಗೆ ಸಾಲವನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಬೇರೆ ಯಾರ ಹತ್ತಿರವಾದರೂ ಸಾಲ ಪಡೆದುಕೊಂಡಿದ್ದಾರಾ ಎಂದು ವಿಚಾರಣೆ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಾನು ಆರೋಪಿಗೆ ಹಣವನ್ನು ದಿನಾಂಕ 13.10.2013 ರಂದು ನೀಡಿರುತ್ತೇನೆ. ಹಣ ನೀಡುವ ಸಂದರ್ಭದಲ್ಲಿ ಆರೋಪಿಯ ಹಣ ಕಾಸಿನ ಸ್ಥಿತಿಗತಿಯ ಬಗ್ಗೆ ನೀವು ವಿಚಾರಣೆ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಣವನ್ನು ನಾನು ಆ ದಿನ ನನ್ನ ಅಂಗಡಿಯಲ್ಲಿ ನೀಡಿರುತ್ತೇನೆ, ಆಗ ಸಮಯ ಬೆಳಗ್ಗೆ 11.00 ರಿಂದ 12.00 ಗಂಟೆ ಆಗಿರಬಹುದು.

ಆರೋಪಿ ಎಷ್ಟು ಗಂಟೆಗೆ ಕೆಲಸಕ್ಕೆ ಹೋಗಿ ಎಷ್ಟು ಗಂಟಗೆ ಮನೆಗೆ ವಾಪಾಸ್ಸು ಬರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ದಿನಾಂಕ 13.10.2013 ರಂದು ನನ್ನ ಬಳಿ ರೂ.1,50,000/- ಹಣ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಹಣ ನೀಡಿದ ದಿನ ಯಾವುದಾದರೂ ಬರವಣಿಗೆ ಆಗಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದೇ ದಿನ ನಿಪಿ.1 ಚೆಕ್ ಅನ್ನು ಆರೋಪಿ ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ಚೆಕ್ ಅನ್ನು ಮೊದಲೇ ಬರೆದುಕೊಂಡು ಬಂದಿದ್ದು ನನ್ನ ಸಮಕ್ಷಮ ಚೆಕ್ ಗೆ ಸಹಿ ಮಾಡಿರುತ್ತಾರೆ.

ದಿನಾಂಕ 13.10.2013 ರಂದು ಆರೋಪಿ ಕರ್ತವ್ಯದಲ್ಲಿ ಇದ್ದು ನನ್ನ ಅಂಗಡಿಯ ಬಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಕೀಲರ ಮುಖಾಂತರ ನೀಡಿರುವ ನೋಟೀಸಿನ ದಿನಾಂಕ ನನಗೆ ನೆನಪಿಲ್ಲ. ನೋಟೀಸಿನಲ್ಲಿ ಏನು ವಿಚಾರ ಬರೆದಿರುತ್ತದೆ ಎಂದು ನನಗೆ ಗೊತ್ತಿರುತ್ತದೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**